ತಂತಿ ವಿಳಾಸ: ಯೂನಿರೆಜ್
ದೂರವಾಣಿ ಸಂಖ್ಯೆ.: 2419700/2419567
ಫ್ಯಾಕ್ಸ್: 0821-2419363/2419301

e-mail: pmeb@uni-mysore.ac.in
www.uni-mysore.ac.in

# ಮೈಸೂರು ವಿಶ್ವವಿದ್ಯಾನಿಲಯ

ಸ್ಥಾಪನೆ: 1916

ವಿಶ್ವವಿದ್ಯಾನಿಲಯ ಕಾರ್ಯಸೌಧ
ಕ್ರಾಫರ್ಡ್ ಭವನ, ಮೈಸೂರು

(Re-accredited by NAAC at "A" Grade with a CGPA of 3.47)
(Ranked 57th overall and 36th among Universities in NIRF ranking 2017)

ಸಂಖ್ಯೆ: PMEB/21/Invite Foreign Faculty/2018-19 | 417 ದಿನಾಂಕ: 02-01-2019.

## ಸುತ್ತೋಲೆ

ವಿಷಯ: ವಿದೇಶಿ ಸಂದರ್ಶಕ ಪ್ರಾಧ್ಯಾಪಕರನ್ನು ಆಹ್ವಾನಿಸುವ ಬಗ್ಗೆ.

ಉಲ್ಲೇಖ: 1. 2018-19ನೇ ಸಾಲಿನ ವಿಶ್ವವಿದ್ಯಾನಿಲಯ ಆಯವ್ಯಯ ಕಂಡಿಕೆ ಸಂಖ್ಯೆ: 301.
2. ದಿನಾಂಕ: 17-12-2018ರಂದು ವಿದೇಶಿ ಸಂದರ್ಶಕ ಪ್ರಾಧ್ಯಾಪಕರನ್ನು ಆಹ್ವಾನಿಸುವ ಬಗ್ಗೆ ನಡೆದ ಸಭೆಯ ಶಿಫಾರಸ್ಸು.

*****

ಮಾನ್ಯ ಕುಲಪತಿಗಳ ಆದೇಶದ ಮೇರೆಗೆ, ವಿಶ್ವವಿದ್ಯಾನಿಲಯದ ವಿವಿಧ ಸ್ನಾತಕೋತ್ತರ ವಿಭಾಗಗಳಿಗೆ ವಿದೇಶಿ ಸಂದರ್ಶಕ ಪ್ರಾಧ್ಯಾಪಕರನ್ನು(Visiting Professor) ಆಹ್ವಾನಿಸಲು ಆಯವ್ಯಯದಲ್ಲಿ ಅವಕಾಶವಿದ್ದು, ಈ ಬಗ್ಗೆ ದಿನಾಂಕ:17-12-2018ರಂದು ನಡೆದ ಸಭೆಯ ಶಿಫಾರಸ್ಸು ಹಾಗೂ ಮಾನ್ಯ ಕುಲಪತಿಗಳ ಆದೇಶದ ಮೇರೆಗೆ, ಈ ಕೆಳಗಿನ ಮಾರ್ಗದರ್ಶಿ ಸೂತ್ರಗಳನ್ವಯ ಆಹ್ವಾನಿಸಲು ಆಸಕ್ತ ವಿಭಾಗಗಳು ಕ್ರಮಕೈಗೊಳ್ಳಬೇಕೆಂದು ಸೂಚಿಸಲಾಗಿದೆ.

1. ವಿದೇಶಿ ಪ್ರಾಧ್ಯಾಪಕರು ಪ್ರಸಕ್ತ ಸಾಲಿನ TIME/Shanghai/QS ಜಾಗತಿಕ ರ್‍ಯಾಂಕಿಂಗ್‌ನಲ್ಲಿ ಮೊದಲ 500 ಸ್ಥಾನಗಳಲ್ಲಿರುವ ವಿಶ್ವವಿದ್ಯಾನಿಲಯಗಳಲ್ಲಿ ಸೇವೆ ಸಲ್ಲಿಸುತ್ತಿರುವವರಾಗಿರಬೇಕು.
2. ಆಹ್ವಾನಿಸಲ್ಪಡುವವರು ವಿದೇಶಿ ಪ್ರಜೆ ಅಥವಾ ವಿದೇಶಿ ವಿಶ್ವವಿದ್ಯಾನಿಲಯದಲ್ಲಿ ಡಾಕ್ಟರೇಟ್ ಪದವಿ ಪಡೆದು, ಮೊದಲ 500 ಸ್ಥಾನದಲ್ಲಿರುವ ಯಾವುದೇ ವಿದೇಶದ ವಿಶ್ವವಿದ್ಯಾನಿಲಯದಲ್ಲಿ ಬೋಧಿಸುತ್ತಿರುವವರಾಗಿರಬೇಕು.
3. ಸಂದರ್ಶಕ ಪ್ರಾಧ್ಯಾಪಕರಾಗಿ ಬರುವವರು ಕನಿಷ್ಠ 10 ರಿಂದ 15 ದಿನಗಳ ಕಾಲ ವಿಶ್ವವಿದ್ಯಾನಿಲಯದಲ್ಲಿ ಲಭ್ಯವಿರಬೇಕು, ಈ ಅವಧಿಯಲ್ಲಿ ಸ್ನಾತಕೋತ್ತರ ವಿದ್ಯಾರ್ಥಿಗಳಿಗೆ ಅವರ ಪಠ್ಯ ವಿಷಯಗಳಿಗೆ ಸಂಬಂಧಿಸಿದಂತೆ ಕನಿಷ್ಠ 8 ಘಂಟೆಗಳ ಉಪನ್ಯಾಸ ನೀಡಬೇಕು ಮತ್ತು ಸಂಶೋಧನಾ ವಿದ್ಯಾರ್ಥಿಗಳು ಹಾಗೂ ಅಧ್ಯಾಪಕ ವರ್ಗದವರಿಗೆ ಸಂಶೋಧನಾ ವಿಷಯಗಳ ಬಗ್ಗೆ ಸಲಹೆ ಸೂಚನೆ ನೀಡಬೇಕು.
4. ಸಂದರ್ಶಕ ಪ್ರಾಧ್ಯಾಪಕರಿಗೆ ತಮ್ಮ ಸ್ಥಳದಿಂದ ಮೈಸೂರಿಗೆ ಬಂದು ಹೋಗುವ ಪ್ರಯಾಣ ವೆಚ್ಚ(ಎಕಾನಮಿ ದರ್ಜೆಯಲ್ಲಿ) ವಿಶ್ವವಿದ್ಯಾನಿಲಯದ ಅತಿಥಿಗೃಹದಲ್ಲಿ ಉಚಿತ ತಂಗುವ ವ್ಯವಸ್ಥೆ ಮತ್ತು 5000 ಅಮೆರಿಕನ್ ಡಾಲರ್‌ಗಳ ಗೌರವಧನ ನೀಡಲಾಗುವುದು.

ಮು.ತಿ.ನೋ.,

5. ಸಂಬಂಧಿತ ವಿಭಾಗದಿಂದ ಸಂದರ್ಶಕ ಪ್ರಾಧ್ಯಾಪಕರನ್ನು ಸಂಪರ್ಕಿಸಿ, ಅವರ ಸಮ್ಮತಿ ಪಡೆದು, ಅವರು ಬರುವ ದಿನಾಂಕಗಳನ್ನು ನಿಗಧಿಪಡಿಸಿಕೊಂಡು ನಂತರ ವಿಶ್ವವಿದ್ಯಾನಿಲಯದ ಅನುಮೋದನೆ ಪಡೆದು ಆಹ್ವಾನಿಸಬೇಕು.

6. 2018–19ನೇ ಸಾಲಿಗೆ ಸುಮಾರು 10 ಜನ ವಿದೇಶೀ ತಜ್ಞರನ್ನು ಆಹ್ವಾನಿಸಲು ಮಾತ್ರ ಅವಕಾಶವಿರುವುದರಿಂದ ಮೊದಲು ಅನುಮತಿ ಕೋರುವ ವಿಭಾಗಕ್ಕೆ ಆದ್ಯತೆ ನೀಡಲಾಗುವುದು.

7. ಮೊದಲನೇ ವಿಷಯಕ್ಕೆ ಸಂಬಂಧಿಸಿದಂತೆ ಹೆಚ್ಚಿನ ಮಾಹಿತಿಗಾಗಿ ನಿರ್ದೇಶಕರು, ಪಿ.ಎಂ.ಇ.ಬಿ., ಇವರನ್ನು ಸಂಪರ್ಕಿಸಬಹುದು.

ಎಲ್ಲಾ ಸ್ನಾತಕೋತ್ತರ ವಿಭಾಗಗಳೂ ಈ ಯೋಜನೆಯ ಸದುಪಯೋಗ ಪಡೆದುಕೊಂಡು ವಿದೇಶಿ ಸಂದರ್ಶಕ ಪ್ರಾಧ್ಯಾಪಕರನ್ನು ಆಹ್ವಾನಿಸಲು ಕ್ರಮಕೈಗೊಳ್ಳಬೇಕಾಗಿ ಸೂಚಿಸಲಾಗಿದೆ.

Rajumd 3/1/19
ಕುಲಸಚಿವ

ಇವರಿಗೆ,

1. ವಿಶ್ವವಿದ್ಯಾನಿಲಯದ ಎಲ್ಲಾ ಅಧ್ಯಯನ ವಿಭಾಗ/ಸಂಸ್ಥೆಯ ಅಧ್ಯಕ್ಷರು/ನಿರ್ದೇಶಕರು, ಮಾನಸಗಂಗೋತ್ರಿ, ಮೈಸೂರು.
2. ನಿರ್ದೇಶಕರು, ಸ್ನಾತಕೋತ್ತರ ಕೇಂದ್ರ ಮಂಡ್ಯ/ಹಾಸನ/ಚಾಮರಾಜನಗರ.

ಪ್ರತಿ:

1. ಎಲ್ಲಾ ನಿಕಾಯದ ಡೀನರು, ಮಾನಸಗಂಗೋತ್ರಿ, ಮೈಸೂರು.
2. ಕುಲಸಚಿವರು(ಪರೀಕ್ಷಾಂಗ), ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.
3. ಹಣಕಾಸು ಅಧಿಕಾರಿಗಳು, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.
4. ಆಡಳಿತಾಧಿಕಾರಿಗಳು, ಆಡಳಿತಾಧಿಕಾರಿಗಳ ಕಛೇರಿ, ಮಾನಸಗಂಗೋತ್ರಿ, ಮೈಸೂರು.
5. ಪ್ರೊ.ಸುರೇಶ್, ಸಿಸ್ಟಂ ಕೋ–ಆರ್ಡಿನೇಟರ್, ಐ.ಸಿ.ಡಿ., ಗಣಕ ವಿಜ್ಞಾನ ಅಧ್ಯಯನ ವಿಭಾಗ, ಮಾ.ಗಂ.,– ವಿಶ್ವವಿದ್ಯಾನಿಲಯದ ವೆಬ್‌ಸೈಟ್‌ನಲ್ಲಿ ಮಾಹಿತಿಗಾಗಿ ಪ್ರಕಟಿಸುವಂತೆ ಕೋರಿದೆ.
6. ಉಪಕುಲಸಚಿವರು/ಸಹಾಯಕ ಕುಲಸಚಿವರು(ಸಾಮಾನ್ಯ/ಸಿಬ್ಬಂದಿ/ಪಿ.ಡಿ.ಐ.), ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.
7. ಮಾನ್ಯ ಕುಲಪತಿಗಳ/ಕುಲಸಚಿವರ/ಕುಲಸಚಿವರು(ಪರೀಕ್ಷಾಂಗ)/ಹಣಕಾಸುಅಧಿಕಾರಿಗಳ ಆಪ್ತ ಸಹಾಯಕರು, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.
8. ಕಛೇರಿ ಪ್ರತಿ.

Raj/Gen. Let. Kann.